ಕುಬೇರಪ್ಪ ಎಂ. ವಿಭೂತಿ, ಹರಿಹರ
*ಶ್ರೇಷ್ಠವಾದ ಓದುವ ಅಭಿರುಚಿಯಿರುವವರೂ ಪತ್ರಿಕೆಗಳನ್ನು ಕೊಂಡು ಓದದಿರುವುದೇಕೆ?*



ಕೊಂಡು ಓದುವವನಿಗೆ ಒಂದೇ ಪತ್ರಿಕೆ, ಕೊಳ್ಳದವನಿಗೆ ಹತ್ತಾರು!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಹಿಟ್ಲರ್, ಸ್ಟಾಲಿನ್ ಮತ್ತು ಚರ್ಚಿಲ್ ಈಗಿನ ವಿದ್ಯಮಾನಗಳನ್ನು ಕಂಡರೆ ಹೇಗೆ ಪ್ರತಿಕ್ರಿಯೆ ತೋರುತ್ತಿದ್ದರು ಸಾರ್?*

ನ್ಯೂಕ್ಲಿಯರ್ ಬಾಂಬ್ ಹಾಕಿ 5 ದಿನಗಳಲ್ಲಿ ಮುಗಿಸಬಹುದಾಗಿದ್ದ ಯುದ್ಧಕ್ಕೆ 5 ವರ್ಷ ತೆಗೆದುಕೊಂಡೆವಲ್ಲಾ ಎಂದು ಮರುಗುತ್ತಿದ್ದರು!

ಬಿಂಡಿಗನವಿಲೆ ರಂಗರಾಜು, ಬೆಂಗಳೂರು
*ಮಹಿಳಾ ಕಾಲೇಜಿನ ಉಪನ್ಯಾಸಕರೊಬ್ಬರು ವಯಸ್ಸಾದರೂ ಇನ್ನೂ ಬ್ರಹ್ಮಚಾರಿಗಳಾಗಿಯೇ ಇದ್ದಾರಲ್ಲಾ..?*

'ನೆಕ್ಸ್ಟ್ ಬ್ಯಾಚ್‌ನಲ್ಲಿ ಇನ್ನೂ ಚೆನ್ನಾಗಿರುವ ಹುಡುಗಿ ಸಿಗಬಹುದು' ಎಂದು ಪ್ರತಿವರ್ಷ ಕಾದುದರ ಫಲ!

ಎನ್. ಪ್ರಕಾಶ್, ದೇವನಹಳ್ಳಿ
*ಬೆನ್ನ ಹಿಂದಿನಿಂದ ತಿವಿಯುವವರಿಗೂ, ಎದುರಿನಿಂದ ಹೃದಯಕ್ಕೆ ತಿವಿಯುವವರಿಗೂ ಏನು ವ್ಯತ್ಯಾಸ?*



ಒಬ್ಬ ಅನಸ್ತೇಶಿಯಾ ಕೊಡುವವನು, ಮತ್ತೊಬ್ಬ ಹಾರ್ಟ್ ಸರ್ಜನ್!

ಸವಿರವಿ, ಚಿಕ್ಕಮಗಳೂರು
*ಎಲ್ಲರೂ ಗೆದ್ದ ಎತ್ತಿನ ಬಾಲವನ್ನೇ ಏಕೆ ಹಿಡಿಯುತ್ತಾರೆ?*

ನಿಜವಾದ ಹಿಂ–ಬಾಲ–ಕರು ಎಂದು ಸೂಚಿಸಲು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಸಮಾಜದಲ್ಲಿರುವ ನರಿಬುದ್ಧಿಯ ಜನರನ್ನು ಏನು ಮಾಡಬೇಕು?*

ಬೇಹುಗಾರಿಕೆ ದಳಕ್ಕೆ ಸೇರಿಸಿಬಿಡಿ!

ಎಚ್.ಎಸ್. ಶಿವಶಂಕರ್, ಚಿಕ್ಕಲಸಂದ್ರ
*ಸಾಮಾನ್ಯವಾಗಿ ಎಲ್ಲಾ ಬಸ್ಸಿನ ಡ್ರೈವರ್, ಕಂಡಕ್ಟರ್‌ಗಳು ಕೆಂಪು ಟವಲ್‌ಗಳನ್ನೇ ಬಳಸುವುದೇಕೆ?*

ಒಸರಿದ ಗುಟ್ಕಾ ರಸಕ್ಕೆ ಮ್ಯಾಚಿಂಗ್ ಆಗಿರಲೆಂದು!

ಎಂ. ಪರಮೇಶ್ವರ, ಮದ್ದೀಹಳ್ಳಿ
*ಭಾರತಕ್ಕಿರುವ ಜಾತ್ಯತೀತ ಎಂಬ ಪಟ್ಟಿಯನ್ನು ಅಳಿಸಿಹಾಕಲು ಸ್ವಾಮೀಜಿಗಳು ತುಂಬಾ ಕಷ್ಟಪಡುತ್ತಿದ್ದಾರಲ್ಲಾ...?*

ಬರಿದೇ ಪಟ್ಟಿ ಮಾತ್ರವೇ ಇದೆ ಸಾರ್, ರಾಜಕೀಯ ಇರುವವರೆಗೆ ಜಾತ್ಯತೀತತೆ ನುಸುಳಲೂ ಸಾಧ್ಯವಿಲ್ಲ!

ಕಾ. ಪ್ರಕಾಶ್, ಕನಕಪುರ
*ವಿಧಾನಸೌಧ ಹೆಂಡದಂಗಡಿಯಾದರೆ, ಜನ ಪ್ರತಿನಿಧಿಗಳು?*

ಹರಾಜಿಗಿರುವ ಪ್ಯಾಕೆಟ್‌ಗಳು!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಹೆಂಡತಿಗಿಂತ ಪವಿತ್ರವಾದ ವಸ್ತು ಈ ಪ್ರಪಂಚದಲ್ಲಿ ಏನಿದೆ ಗುರುಗಳೆ?*

ಹೆಂಡತಿಯನ್ನು ವಸ್ತು ಎನ್ನದೆ ವ್ಯಕ್ತಿ ಅಥವಾ ಶಕ್ತಿ ಎನ್ನುವುದು ಇನ್ನೂ ಪವಿತ್ರ!

ಮಹಾವೀರ ಕಾಸಾರ, ಚನ್ನಗಿರಿ
*ಸುಂದರವಾದ ಹೆಂಡತಿ ಚಿನ್ನದ ಕತ್ತಿ ಇದ್ದಂತೆ ಎನ್ನುತ್ತಾರಲ್ಲಾ...?*

ಸುಂದರಿ ಸಾಮಾನ್ಯವಾಗಿ ಮೊಂಡೂ ಆಗಿರುತ್ತಾಳಾದ್ದರಿಂದ ತೊಂದರೆಯಿಲ್ಲ!

ಎಂ.ಎನ್. ಸೋಮಶೇಖರ್, ಮೈಸೂರು
*ನಿಮಗಿರುವ ಉತ್ತಮ ಮಿತ್ರರು ಯಾರು?*

ನೀವೇ; ಅಂಕಣಕಾರನಿಗೆ ಓದುಗನಿಗಿಂತಲೂ ಉತ್ತಮ ಮಿತ್ರನಿಲ್ಲ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಮತದಾರನನ್ನು ಕಡೆಗಣಿಸಿದ ಪ್ರತಿನಿಧಿಗೂ, ಮತನೀಡದ ಮತದಾರನಿಗೂ ಅಂತರವಿದೆಯೆ?*

ಅವರದು ಅಸಡ್ಡೆ, ಇವರದು ಬೇಜವಾಬ್ದಾರಿ!

ನರಸಿಂಹ ಎಂ. ಪೈ, ಹೊನ್ನಾವರ
*ನಾನು, ನನ್ನದೆಂಬುದು ಅಹಂಕಾರ; ನೀನು, ನಿನ್ನದೆಂಬುದು...?*

ಆಪಾದನೆಯ ನುಡಿಗಳು!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
*ಕನಸಿನಲ್ಲಿ ಹೆಂಡತಿ ಕಾಣಿಸಿಕೊಂಡರೆ ಅದು ಶುಭವೋ, ಅಶುಭವೋ?*

ಯಾರ ಹೆಂಡತಿ, ಯಾರ ಕನಸಿನಲ್ಲಿ? ಸ್ವಂತ ಹೆಂಡತಿಯೇ ಆದರೆ ಅದು ಕನಸಲ್ಲ, ದುಃಸ್ವಪ್ನ!

ಎನ್.ಎ. ಶ್ರೀನಾಥ್, ಕತ್ರಗುಪ್ಪ
*ಏಪ್ರಿಲ್ ಒಂದರಂದು ನಿಶ್ಚಿತಾರ್ಥವಾಗಿ ಆಗಸ್ಟ್ 15ರಂದು ವಿವಾಹವಾದವನ ಭವಿಷ್ಯ ಹೇಗಿರಬಹುದು?*

ಎಡವಟ್ ದಿನದಲ್ಲೇ ಹುಟ್ಟಿ, ಎಡವಟ್ ದಿನದಲ್ಲೇ ವಿವಾಹವಾದ್ದರಿಂದ ಎಡ್ಡೂರಪ್ಪನ ಭವಿಷ್ಯದಂತೆಯೇ ಇರಬಹುದು!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ದೇಶ ಮೊದಲು; ಆನಂತರ...?*

ವಿದೇಶ; ಸಾಮಾನ್ಯವಾಗಿ ಎಲ್ಲಾ ಸಾಫ್ಟ್‌ವೇರ್ ಎಂಜಿನಿಯರ್‌ಗಳ ಕಥೆಯೂ ಇದೇ ? ಓದು ಇಲ್ಲಿ, ಕೆಲಸ ಅಲ್ಲಿ.

ವಿ. ಹಮೀದ್, ವಿಟ್ಲ
*ಮೀಸೆ ಹೊತ್ತ ಹುಡುಗನಿಗೆ ಡಿಮ್ಯಾಂಡ್ ಯಾಕೆ?*




ಮೀಸೆ ಹೊತ್ತವನು ಇಲಿಯೋ, ಜಿರಳೆಯೋ, ಬೆಕ್ಕೋ, ಚಿರತೆಯೋ ಎಂದು ಕಂಡುಹಿಡಿಯುವ ಕುತೂಹಲ!

ಬಾಲುಸುತ, ಬೆಂಗಳೂರು
*ಆಗ 'ಅಂದದೂರು ಬೆಂಗಳೂರು' ಈಗ 'ಮೆಟ್ರೋ ಬೆಂಗಳೂರು', ಮುಂದೆ?*

ವಾಸಿಸುವ ಬೆಲೆ ಬಹಳ ದುಬಾರಿಯಾಗಿ, ಯಾರ ಕೈಗೂ ಅಂದದ ಊರು!

ಎಚ್.ಆರ್. ದೇಸಾಯಿ, ರಾಯಚೂರು
*ಆದಿಮಾನವನನ್ನು 'ಮಾನವ' ಮಾಡಿದ್ದು ಯಾವುದು?*

ಸಂಸಾರ, ಸಂಸ್ಕಾರ!

■ ರಾಮ್